ಶ್ರೀರಾಮಕೃಷ್ಣರ ಬಳಿ ಸದಾ ಇರುತ್ತಿದ್ದ ರಾಖಾಲನ ತಂಡದ ಒಬ್ಬ ಭಕ್ತ ರಾಮಕೃಷ್ಣರಿಗೆ ಪ್ರಶ್ನೆಹಾಕಿದ: ''ಗೃಹಸ್ಥಾಶ್ರಮಿಗೆ ಭಗವತ್ ಸಾಕ್ಷಾತ್ಕಾರ ಸಾಧ್ಯವೆ?'' ಇದಕ್ಕೆ ಅವರು ಕೊಟ್ಟ ಉತ್ತರ:

''ಏಕೆ ದೊರೆಯುವುದಿಲ್ಲ? ಕೆಸರುಮೀನಿನ ಹಾಗಿರಿ. ಅದು ಕೆಸರಿನಲ್ಲೇನೋ ವಾಸಿಸುತ್ತದೆ. ಆದರೆ ಅದು ತನ್ನ ಶರೀರಕ್ಕೆ ಕೆಸರನ್ನು ಅಂಟಿಸಿಕೊಳ್ಳುವುದಿಲ್ಲ. ಅಥವಾ ಜಾರೆಯಂತಿರಿ. ಆಕೆ ಮನೆಯ ಕೆಲಸ ಕಾರ್ಯಗಳನ್ನೆಲ್ಲಾ ಚೆನ್ನಾಗಿ ಮಾಡುತ್ತಿರುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ಉಪಪತಿಯ ಮೇಲೆ ನೆಲೆಸಿರುತ್ತದೆ. ಭಗವಂತನಲ್ಲಿ ಮನಸ್ಸಿಟ್ಟು ಸಂಸಾರದಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡಿ...'' ಶ್ರೀರಾಮಕೃಷ್ಣರು ತಮ್ಮ ಅಮೃತಧಾರೆಯನ್ನು ಆರಂಭಿಸಿದರೆ ಅದರಲ್ಲಿ ಅಧ್ಯಾತ್ಮ ಹಾಗೂ ಲೌಕಿಕದ ಸಮಾಗಮ ಸಹಜವಾಗಿ ಏರ್ಪಡುತ್ತದೆ. ಗಹನವಾದ ವಿಷಯವನ್ನು ಅರ್ಥೈಸಲು ಇದೊಂದು ಸರಳ ಮಾರ್ಗ. ಜಟಿಲವಾದ ತತ್ತ್ವವಿಚಾರಗಳನ್ನು ಅಲ್ಲಿ ಸುಲಭವಾಗಿ ತಲುಪಿಸಲು ಸಾಧ್ಯ. ಇಂದಿನ ಶಿಕ್ಷಣ ಕ್ರಮದಲ್ಲಿ ಇದರ ಅಗತ್ಯವಿದೆ. ಕ್ಲಿಷ್ಟಕರ ವಿಷಯಗಳನ್ನು ಸುಲಭೀಕರಿಸಲು ಇದೊಂದು ಸರಳ ಸೂತ್ರ. ಲೌಕಿಕದಲ್ಲೇ ಮುಳುಗಿದ್ದವರನ್ನು ಮೇಲೆತ್ತಲು, ಅವರಲ್ಲಿ ಅಧ್ಯಾತ್ಮದ ಚಿಗುರೊಡೆಯಲು ರಾಮಕೃಷ್ಣರು ಬಳಸಿದ ಸರಳ ತಂತ್ರ.

ಕಾಮಿನಿ-ಕಾಂಚನದ ವ್ಯಾಮೋಹದಿಂದ ಹೊರಬರಲು ರಾಮಕೃಷ್ಣರು ಸೂಚಿಸಿದ ಮಾರ್ಗ: ''ಸಾಧುಸಂಗ-ನಿರ್ಜನ ವಾಸ''. ಇದರ ಪರಿಣಾಮನಾಗಿ ಅದರಿಂದ ಮುಕ್ತರಾದವರು ಅದೆಷ್ಟೋ ಮಂದಿ. ಗಿರೀಶ್‌ಚಂದ್ರ ಘೋಶ್, ರಾಖಾಲ, ನಾಗ ಮಹಾಶಯ ಇನ್ನೂ ಮುಂತಾದ ಹಲವಾರು ಸಾಧುಸಂತರು ನಿರ್ಜನ ವಾಸದ ಕಾರಣ ಪರಿವರ್ತನೆಯ ಮಹಾಪೂರಕ್ಕೆ ಉದಾಹರಣೆಯಾದರು. ನಾಗಮಹಾಶಯ ವೃತ್ತಿಯಲ್ಲಿ ಒಬ್ಬ ವೈದ್ಯ ಆದರೆ, ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದಮೇಲೆ ಅವನ ದಿಕ್ಕೇ ಪೂರ್ಣ ಬದಲಾಯಿತು. ರಾಮಕೃಷ್ಣರ ಬಗೆಗಿನ ಭಕ್ತಿಯ ಅಮಲು ಅವನನ್ನು ಪೂರ್ಣ ಆವರಿಸಿತು. ರಾಮಕೃಷ್ಣರ ಬಗ್ಗೆ ವಿದುರನಿಗಿದ್ದಂತಹ ಭಕ್ತಿಯ ಪರಾಕಾಷ್ಠೆಗೆ ಆತ ಉದಾಹರಣೆಯಾದ. ಸಾಧುಸಂಗದ ಮಹಿಮೆ ಎಂತಹುದು ಎಂಬುದಕ್ಕೆ ರಾಮಕೃಷ್ಣರು ಕೊಡುವ ಉದಾಹರಣೆ ಎಂಥವರನ್ನೂ ಶೀಘ್ರವೇ ಆಕರ್ಷಿಸಿ ಬಿಡುತ್ತದೆ:

ಒಬ್ಬ ವ್ಯಕ್ತಿ ಸಾಧುವೊಬ್ಬನನ್ನು ಕಂಡು ನನಗೇನಾದರೂ ಬೋಧನೆ ಮಾಡಿ ಎಂದು ಕೇಳಿದ. ಅದಕ್ಕೆ ಸಾಧು ''ದೇವರನ್ನು ಹೃತ್ಪೂರ್ವಕ ಪ್ರೀತಿಸು'' ಎಂದ. ಅದಕ್ಕೆ ಆ ವ್ಯಕ್ತಿ ''ನಾನು ದೇವರನ್ನು ಎಂದೂ ಕಂಡಿಲ್ಲ. ಹೇಗೆ ಪ್ರೀತಿಸಲಿ?'' ಎಂದು ಕೇಳಿದ. ಆಗ ಸಾಧು ''ನೀನು ಹೃತ್ಪೂರ್ವಕ ಯಾರನ್ನು ಪ್ರೀತಿಸುತ್ತೀಯಾ?'' ಎಂದು ಕೇಳಿದ. ಅದಕ್ಕೆ ಆ ವ್ಯಕ್ತಿ ''ನನ್ನವರೆಂದು ಯಾರೂ ಇಲ್ಲ. ನನ್ನದೊಂದು ಕುರಿ ಇದೆ, ನಾನು ಅದನ್ನೇ ನನ್ನ ಪ್ರಾಣದಂತೆ ಪ್ರೀತಿಸುತ್ತೇನೆ'' ಎಂದ. ಆಗ ಸಾಧು, ''ಹಾಗಾದರೆ ಆ ಕುರಿಯನ್ನು ನಿನ್ನ ಮನಸ್ಸಿನಲ್ಲಿಟ್ಟು ಪ್ರೀತಿಸು, ಯಾವಾಗಲೂ ಆ ಕುರಿಯಲ್ಲಿ ದೇವರಿರುವನು ಎಂಬುದನ್ನು ನಂಬು'' ಎಂದು ಹೇಳಿದ. ಆತ ಅದರಂತೆಯೇ ಕುರಿಯನ್ನೇ ದೇವರೆಂದು ನಂಬಿ ಅದರಲ್ಲಿಯೇ ದೇವರನ್ನು ಕಾಣಲು ಪ್ರಯತ್ನಿಸಿದ. ಸ್ವಲ್ಪ ಸಮಯದ ನಂತರ ಅದೇ ಸಾಧು ಹಿಂತಿರುಗಿ ಬರುವಾಗ ಭೇಟಿಯಾದ. ''ನೀವು ನನಗೆ ಕೊಟ್ಟ ಬೋಧನೆಯಿಂದ ನನಗೆ ಒಳ್ಳೆಯದಾಗಿದೆ. ನಾನು ಚೆನ್ನಾಗಿರುವೆ. ನಾಲ್ಕು ಕೈಗಳಿರುವ ಸುಂದರ ಮೂರ್ತಿಯನ್ನು ಹಲವು ಬಾರಿ ನನ್ನ ಕುರಿಯಲ್ಲಿ ಕಂಡಿದ್ದೇನೆ'' ಎಂದು ಕೃತಜ್ಞತೆ ಅರ್ಪಿಸಿದ.

ಶ್ರೀರಾಮಕೃಷ್ಣರು ಹೇಳುವ ದೃಷ್ಟಾಂತ ಕಥೆಗಳು ತೀರಾ ಸಾಮಾನ್ಯರ ಮೇಲೆ ಹೆಚ್ಚಿನ ಪರಿಣಾಮವನ್ನು ಉಂಟುಮಾಡುವಷ್ಟು ಶಕ್ತಿಪೂರ್ಣವಾದವು. ಅವು ಬೇಗ ಮನಮುಟ್ಟುತ್ತವೆ, ಬುದ್ಧಿಯನ್ನು ಚುರುಕುಗೊಳಿಸುತ್ತವೆ. ಪರಿವರ್ತನೆಗೆ ಕಾರಣವಾಗುತ್ತವೆ. ಮುಗ್ಧ ಭಕ್ತಿಗೆ ರಾಮಕೃಷ್ಣರು ಕೊಡುವ ಮತ್ತೊಂದು ದೃಷ್ಟಾಂತ ಕಥೆ ಕೂಡ ಅಷ್ಟೇ ಪರಿಣಾಮಕಾರಿ. ಜೊತೆಗೆ ಯಾವುದೇ ಕಾರ್ಯದಲ್ಲಿ ಶ್ರದ್ಧೆ ಮುಖ್ಯವೇ ಹೊರತು, ನಾನೇ ಮೇಲು ಎಂಬ ಅಹಂ ಅಲ್ಲ ಎಂಬುದನ್ನು ಅರಿವು ಮಾಡಿಕೊಡುವಲ್ಲಿ ಅದು ಗಮನ ಸೆಳೆಯುತ್ತದೆ. 'ಶ್ರದ್ಧೆ ಮತ್ತು ಶರಣಾಗತಿ ಭಾವ' ಎಂತಹವರನ್ನೂ ಮೇಲೆತ್ತಬಲ್ಲದು ಎಂಬುದನ್ನು ಸೂಚಿಸುವ ಸರಳ, ಸಣ್ಣ ಘಟನೆ, ದೊಡ್ಡ ಪಾಠವನ್ನೇ ಕಲಿಸುತ್ತದೆ:

ನದಿಯ ಆಚೆಯ ದಡದಿಂದ ಈಚೆಯ ದಡಕ್ಕೆ ಪ್ರತಿನಿತ್ಯ ಒಬ್ಬ ಹಾಲು ಮಾರುವ ಹೆಂಗಸು ಪೂಜಾರಿಯ ಮನೆಗೆ ಹಾಲು ಹಾಕುತ್ತಿದ್ದಳು. ಮನೆಯಿಂದ ಸರಿಯಾದ ಸಮಯಕ್ಕೆ ಹೊರಟರೂ ದೋಣಿ ಸಿಗದ ಕಾರಣ ತಡವಾಗುತ್ತಿತ್ತು. ಒಂದು ದಿನ ಪೂಜಾರಿ ಸಿಟ್ಟಿಗೆದ್ದು ಹಾಲಿನವಳ ಮೇಲೆ ರೇಗಾಡಿ: ''ಎಲೈ ಹೆಂಗಸೆ, ಭಗವಂತನ ನಾಮ ಸ್ಮರಣೆ ಮಾಡಿ ಜನ ಭವಸಾಗರವನ್ನೇ ದಾಟುತ್ತಾರೆ. ಈ ಒಂದು ಸಣ್ಣ ನದಿಯನ್ನು ನೀನು ದಾಟಲಾರೆಯಾ?'' ಎಂದ. ಸರಳಸ್ವಭಾವದ ಆ ಹೆಂಗಸಿಗೆ ಪೂಜಾರಿಯ ಮಾತು ಸಂತೋಷವನ್ನೇ ಉಂಟುಮಾಡಿತು. ದೇವರ ಸ್ಮರಣೆ ಮಾತ್ರದಿಂದ ನದಿ ದಾಟುವ ಉಪಾಯ ದೊರೆತಂತಾಯಿತೆಂದು ಮಾರನೆಯ ದಿನದಿಂದ ಆಕೆ ಹೇಳಿದ ಸಮಯಕ್ಕೆ ಹಾಲನ್ನು ತರಲು ಆರಂಭಿಸಿದಳು. ಒಂದು ದಿನ ಪೂಜಾರಿ ಅವಳನ್ನು ಪ್ರಶ್ನಿಸಿದ: ''ಇತ್ತೀಚೆಗೆ ಸರಿಯಾದ ಸಮಯಕ್ಕೆ ಹಾಲು ತರುತ್ತಿದ್ದೀಯಲ್ಲಾ ಹೇಗೆ?'' ಅದಕ್ಕೆ ಆ ಹೆಂಗಸು: ''ನೀವು ಹೇಳಿದ ಹಾಗೆ ನಾನು ಭಗವಂತನ ಸ್ಮರಣೆ ಮಾಡುತ್ತಾ ನದಿಯ ಮೇಲೆ ನಡೆದು ಬಂದೆ. ನನಗೆ ಈಗ ಈ ದೋಣಿಯ ಆವಶ್ಯಕತೆ ಇಲ್ಲ'' ಎಂದಳು. ಪೂಜಾರಿಗೆ ಅದನ್ನು ಕೇಳಿ ಅನುಮಾನ, ಆಶ್ಚರ್ಯ ಎರಡೂ ಏಕಕಾಲದಲ್ಲಿ ಉಂಟಾದುವು. ಅದನ್ನು ಪರೀಕ್ಷಿಸಲು ಹೊರಟ. ಆಕೆ ಅದಕ್ಕೊಪ್ಪಿ ನದಿಯನ್ನು ನಡೆದುಕೊಂಡೇ ದಾಟಿದಳು. ಇದನ್ನು ಕಂಡು ತಾನೂ ನಡೆಯಲಾರಂಭಿಸಿ ಪೂಜಾರಿ ದುರವಸ್ಥೆಗೆ ಒಳಗಾದ. ಅವಳಲ್ಲಿದ್ದ ಮುಗ್ಧ ಭಕ್ತಿಯಿಂದ ಅದು ಸಾಧ್ಯವಾಗಿತ್ತು. ಅವಳು ಸಂಪೂರ್ಣವಾಗಿ ದೇವರ ಮೇಲೆ ಭಾರ ಹಾಕಿ ನಂಬಿ ನಡೆದಿದ್ದಳು. ಆದರೆ ಪೂಜಾರಿ, ಭಯದಿಂದ, ಎಲ್ಲಿ ಪಂಚೆ ಒದ್ದೆಯಾಗುತ್ತದೊ ಎಂಬ ಎಚ್ಚರದಲ್ಲಿ ದೇವರ ಸ್ಮರಣೆಯನ್ನೇ ಬಿಟ್ಟ - ಶ್ರದ್ಧೆ ಮತ್ತು ಶರಣಾಗತಿ ಭಾವ ಇಲ್ಲದೆ ಯಾವ ಘನಕಾರ್ಯವೂ ಸಾಧ್ಯವಾಗದು.

ಈ ಒಂದು ದೃಷ್ಟಾಂತ ಘಟನೆ ಎಲ್ಲರಿಗೂ ಸುಲಭವಾಗಿ ನಿಲುಕುವಂತಹುದು ಹಾಗೂ ಎಲ್ಲರ ಮೇಲೂ ಪರಿಣಾಮ ಬೀರುವಂತಹುದೂ ಕೂಡ. ಹಾಗೇ ವಿವೇಕ ಮತ್ತು ವಿವೇಚನೆ ಇವುಗಳ ಸಂಬಂಧ ಹಾಗೂ ಇವುಗಳ ಬಗೆಗಿನ ವ್ಯತ್ಯಾಸ ತಿಳಿಸಲು ಶ್ರೀರಾಮಕೃಷ್ಣರು

ಹೇಳುವ ಕಥೆಗಳು ಆಕರ್ಷಕವಾಗಿವೆ. ದೃಶ್ಯ ಮಾಧ್ಯಮದಂತೆಯೇ ಇಂತಹ ಘಟನೆಗಳ ನಿರೂಪಣೆ ಬೇಗ ಪರಿಣಾಮ ಉಂಟುಮಾಡಿ ಪರಿವರ್ತನೆಗೆ ಕಾರಣವಾಗುತ್ತವೆ. ವ್ಯಕ್ತಿ ಬರೀ ವಿವೇಕ ಉಳ್ಳವನಾದರೆ ಸಾಲದು, ವಿವೇಚನಾ ಶಕ್ತಿಯನ್ನು ಬೆಳೆಸಿಕೊಂಡಿರಬೇಕು ಎಂಬುದನ್ನು ತಿಳಿಸಲು ಅವರು ಹೇಳುವ ದೃಷ್ಟಾಂತ ಕತೆ ಸೊಗಸಾಗಿದೆ.

ಒಂದು ಕಾಡಿನಲ್ಲಿ ಒಬ್ಬ ಸಾಧು ಹಲವು ಶಿಷ್ಯರೊಂದಿಗೆ ಇದ್ದ. ಆತ ಒಂದು ದಿನ ಉಪದೇಶ ಮಾಡುವ ಸಂದರ್ಭದಲ್ಲಿ ''ಸರ್ವಭೂತಗಳಲ್ಲಿಯೂ ಭಗವಂತನಿದ್ದಾನೆ. ಇದನ್ನು ಅರಿತುಕೊಂಡು ಅವುಗಳಿಗೆ ನಮಸ್ಕರಿಸಬೇಕು'' ಎಂದು ಹೇಳಿದ. ನಂತರ ಶಿಷ್ಯರೆಲ್ಲಾ ಹೋಮಕ್ಕೆ ಸಮಿತ್ತನ್ನು ತರಲು ಒಟ್ಟಾಗಿ ಕಾಡಿಗೆ ಹೊರಟರು. ಸ್ವಲ್ಪ ಹೊತ್ತಿನಲ್ಲಿಯೇ ಆಶ್ರಮದ ಆನೆಯೊಂದು ಮಾವಟಿಗನ ಅಂಕುಶಕ್ಕೂ ಬಗ್ಗದೆ ಮದಿಸಿ ಶಿಷ್ಯರಿದ್ದೆಡೆಗೆ ಓಡಲಾರಂಭಿಸಿತು. ಕೂಡಲೇ ಮಾವುತ ''ಎಲ್ಲರೂ ಓಡಿ... ಓಡಿ... ಓಡಿ... ಓಡಿ'' ಎಂದು ಎಚ್ಚರಿಸಿದ. ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಓಡತೊಡಗಿದರು. ಆದರೆ ಒಬ್ಬ ಶಿಷ್ಯ ಮಾತ್ರ ನಿಂತಲ್ಲಿಯೇ ನಿಂತಿದ್ದ. ಅವನ ಮನಸ್ಸಿನಲ್ಲಿದ್ದದ್ದು ಗುರುಗಳು ಹೇಳಿದ ''ಸರ್ವಭೂತಗಳಲ್ಲಿಯೂ ಭಗವಂತನಿದ್ದಾನೆ. ಪ್ರತಿಯೊಂದಕ್ಕೂ ಭಕ್ತಿಯಿಂದ ನಮಸ್ಕರಿಸಬೇಕು'' ಎಂಬ ಗುರುವಾಣಿ. ನಂತರ ಆನೆ ಅವನನ್ನು ಎತ್ತಿ ಅತ್ತ ಒಗೆದು ಮುಂದೆ ನಡೆಯಿತು. ಶಿಷ್ಯರೆಲ್ಲ ಗುರುಗಳ ಬಳಿ ತೆರಳಿ ವಿಷಯ ತಿಳಿಸಿದರು. ನಂತರ ಅವನಿಗೆ ಶುಶ್ರೂಷೆ ನಡೆದ ನಂತರ, ''ಏಕೆ ಹೀಗೆ ಮಾಡಿದೆ?'' ಎಂದು ಕೇಳಿದರು. ''ನೀವೇ ಹೇಳಿದ್ದಿರಲ್ಲ ಗುರುಗಳೇ'' ಎಂದು ಪಾಠ ಒಪ್ಪಿಸಿದ. ಅದಕ್ಕೆ ಗುರುಗಳು ಹೇಳಿದರು, ''ಅದು ನಿಜ. ಆದರೆ ಅದೇ ದೇವರು ಮಾವಟಿಗನ ಮೂಲಕ 'ಓಡಿ' ಎಂದು ಎಚ್ಚರಿಸಿದನಲ್ಲ, ಏಕೆ ಓಡಲಿಲ್ಲ?'' ಪ್ರತಿಯೊಂದು ಕ್ಷಣದಲ್ಲಿಯೂ ವಿವೇಕವಿದ್ದರಷ್ಟೇ ಸಾಲದು, ವಿವೇಚನಾಶಕ್ತಿಯೂ ಅಗತ್ಯ. ಇದನ್ನು ತಿಳಿಸುವ ಈ ಒಂದು ದೃಷ್ಟಾಂತ ಕತೆ ರಾಮಕೃಷ್ಣರ ಬೋಧನ ಶಕ್ತಿಗೆ ಉದಾಹರಣೆ.

* **ಸಾಮಾನ್ಯ ಭಕ್ತರೊಂದಿಗಿನ ಪ್ರಶ್ನೋತ್ತರ :** ಶ್ರೀರಾಮಕೃಷ್ಣರ ಬಳಿ ಎಲ್ಲಾ ವರ್ಗದ ಜನರೂ ಬರುತ್ತಿದ್ದರು. ಆದರೆ ಅವರ ದೃಷ್ಟಿಯಲ್ಲಿ ಎಲ್ಲರೂ ಸಮಾನರೇ ಆಗಿರುತ್ತಿದ್ದರು. ಜೀವನದಲ್ಲಿ ನೊಂದು ಬೆಂದವರ ಸಂಖ್ಯೆ ನಾನಾ ತೆರನಾಗಿದ್ದಂತೆ, ನಾನಾ ಬಗೆಯದ್ದೂ ಆಗಿರುತ್ತಿತ್ತು. ಅವರಲ್ಲಿ ಬಹಳಷ್ಟು ಜನ ಭ್ರಮಾಲೋಕವಾಸಿಗಳು. ಅಂತಹವರು ತಮ್ಮದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡು ಬದುಕುವವರು. ಅದನ್ನೇ ನಂಬಿ ಬದುಕುವವರು. ಸ್ವಾಮಿ ವಿವೇಕಾನಂದರು ಈ ಕುರಿತು ಹೇಳುವ ಮಾತೊಂದು ಹೀಗಿದೆ: ''ಮಾನವ ತನ್ನನ್ನು ತಾನು ಸೌಖ್ಯವಾಗಿಸಿಕೊಳ್ಳಬಲ್ಲೆ ಎಂದು ಮೌಢ್ಯದಿಂದ ಭಾವಿಸುವನು. ಹಲವು ವರ್ಷಗಳು ಅದಕ್ಕಾಗಿ ಪ್ರಯತ್ನಪಟ್ಟ ಮೇಲೆ ನಿಜವಾದ ಸುಖ ಸ್ವಾರ್ಥತೆಯ ಅಳಿವಿನಿಂದ ಮಾತ್ರ ಸಾಧ್ಯ, ತಾನಲ್ಲದೆ ಹೊರಗಿನವರಾರೂ ತನ್ನನ್ನು ಸುಖಿಯನ್ನಾಗಿ ಮಾಡಲಾರರು ಎಂದು ತಿಳಿಯುವನು''. ಶ್ರೀರಾಮಕೃಷ್ಣರು ಇದನ್ನೇ ಅದ್ಭುತವಾದ ಒಂದು ದೃಷ್ಟಾಂತದೊಂದಿಗೆ ಮನದಟ್ಟಾಗಿಸುತ್ತಾರೆ. ಭ್ರಮಾಲೋಕದಿಂದ ಹೊರಬಂದಾಗಷ್ಟೇ ವಾಸ್ತವದ ಅರಿವಾಗಲು ಸಾಧ್ಯ:

''ಒಬ್ಬ ಗುರು ತನ್ನ ಶಿಷ್ಯನಿಗೆ, 'ಪ್ರಪಂಚ ಒಂದು ಭ್ರಮೆ, ನನ್ನೊಡನೆ ಬಂದುಬಿಡು' ಎಂದು ಹೇಳಿದ. ಅದಕ್ಕೆ ಆತ: 'ಆದರೆ ಸ್ವಾಮಿ ನನ್ನ ಮನೆಯವರು, ತಂದೆ, ತಾಯಿ, ಹೆಂಡತಿ ಇವರೆಲ್ಲಾ ನನ್ನನ್ನು ಅಷ್ಟೊಂದು ಪ್ರೀತಿಸುತ್ತಾರೆ. ನಾನು ಅವರನ್ನೆಲ್ಲಾ ಅಗಲಿ ಬರುವುದು ಹೇಗೆ?' ಅದಕ್ಕೆ ಗುರು, 'ಇದೆಲ್ಲಾ ನಿನ್ನ ಮನೋಭ್ರಾಂತಿ. ನಾನು ನಿನಗೆ ಒಂದು ಉಪಾಯ ತೋರುತ್ತೇನೆ. ಅವರು ನಿನ್ನನ್ನು ನಿಜವಾಗಿ ಪ್ರೀತಿಸುವರೆ ಇಲ್ಲವೆ ಎಂಬುದು ಗೊತ್ತಾಗುತ್ತದೆ' ಎಂದು ಹೇಳಿ ಒಂದು ಗುಳಿಗೆಯನ್ನು ಕೊಟ್ಟು, 'ಇದನ್ನು ನುಂಗಿ ಮಲಗು. ನೀನು ಸತ್ತಂತೆ ಕಾಣುವೆ. ಆದರೆ ಪ್ರಜ್ಞೆ ಇರುವುದು. ನಿನಗೆ ಎಲ್ಲವೂ ಕಾಣುವುದು, ಮತ್ತು ಕೇಳುವುದು. ಸ್ವಲ್ಪ ಹೊತ್ತು ಬಿಟ್ಟು ನಾನು ಬರುತ್ತೇನೆ' ಎಂದು ಹೇಳಿದ. ಶಿಷ್ಯ ಅದರಂತೆ ಸತ್ತಂತೆ ಮಲಗಿದ. ಮನೆಯವರೆಲ್ಲಾ ಸುತ್ತ ಸುಳಿದು ಗೋಳಾಡಲು ಆರಂಭಿಸಿದರು. ಅಷ್ಟರಲ್ಲಿ ಗುರುವಿನ ಆಗಮನವಾಯಿತು. 'ಏನು ಸಮಾಚಾರ?' ಎಂದು ಏನೂ ತಿಳಿಯದವನಂತೆ ಪ್ರಶ್ನಿಸಿದ. ನಂತರ, 'ನನ್ನ ಬಳಿ ಒಂದು ಔಷಧವಿದೆ. ಅದರಿಂದ ಬದುಕಿಸಲು ಸಾಧ್ಯ. ಆದರೆ ಒಂದು ವಿಷಯ, ಮೊದಲು ಯಾರಾದರೂ ಒಬ್ಬರು ಈ ಔಷಧವನ್ನು ಮೊದಲು ಕುಡಿಯಬೇಕು. ಅವರು ಸಾಯುತ್ತಾರೆ. ಮನೆಗೆ ಆಧಾರವಾದ ಇವನು ಬದುಕುತ್ತಾನೆ' ಎಂದರು. ತಕ್ಷಣವೇ ಅಳುವೆಲ್ಲಾ ನಿಂತಿತು. ಒಬ್ಬೊಬ್ಬರೂ ಬೇರೆಗಾಗಿ ಮೌನಕ್ಕೆ ಮೊರೆಹೋದರು. ತಾಯಿ, ಹೆಂಡತಿ, ಮಕ್ಕಳು ಎಲ್ಲರೂ ಅಲ್ಲಿಂದ ದೂರಸರಿದರು. ಇದನ್ನೆಲ್ಲ ಕಂಡು, ಕೇಳಿದ ಶಿಷ್ಯ ಭ್ರಮಾಲೋಕದಿಂದ ಹೊರಬಂದು 'ಸ್ವಾಮಿಗಳೇ ನಾವೀಗ ಹೋಗೋಣ. ನನಗೆ ಸತ್ಯದ ಅರಿವಾಯಿತು. ನಾನು ನಿಮ್ಮನ್ನು ಅನುಸರಿಸುತ್ತೇನೆ' ಎಂದು ಅವರನ್ನು ಹಿಂಬಾಲಿಸಿ ಹೊರಟ.''

ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತರಲು ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆ. ಆದರೆ ಫಲಿತಾಂಶ ಮಾತ್ರ ಪೂರ್ಣಪ್ರಮಾಣದಲ್ಲಿ ಹೊರಬಂದಂತಿಲ್ಲ. ಬುದ್ಧಿವಂತರು ಬುದ್ಧಿವಂತರಾಗಿಯೇ ಮುಂದುವರಿದರೆ, ದಡ್ಡರೆನಿಸಿದವರು ಹಾಗೇ ಮುಂದುವರಿಯುವಂತಾಗಿದೆ. ಆದರೆ ಎಲ್ಲರನ್ನೂ ಸಮಾನವಾಗಿ ಕಾಣುವ, ರೂಪಿಸುವ ಪ್ರಯತ್ನಗಳು ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾಗಿದೆ. ಶಿಕ್ಷಣವೆಂದರೆ ಕೇವಲ ವಿಷಯ ಜ್ಞಾನ ತುಂಬುವ ಕಾರ್ಯವಾಗಬಾರದು. ಅದರೊಂದಿಗೆ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುವಂತಿರಬೇಕಾದ್ದು ಅನಿವಾರ್ಯ. ಮಕ್ಕಳ ಮನಸ್ಸನ್ನು ಅರಿತು ಬೋಧಿಸುವ ಕಾರ್ಯ ಕೌಶಲದ ಅಗತ್ಯವಿದೆ.

ಶ್ರೀರಾಮಕೃಷ್ಣರು ಕೇವಲ ಅಧ್ಯಾತ್ಮ ಚಿಂತಕರಷ್ಟೇ ಆಗಿರಲಿಲ್ಲ. ಲೌಕಿಕದ ಎಲ್ಲಾ ಸಂಗತಿಗಳನ್ನು ದಿವ್ಯದೃಷ್ಟಿಯಿಂದ ಅರಿತವರಾಗಿದ್ದರು. ಹಾಗಾಗಿ ಅದೇ ವಸ್ತು ವಿಷಯಗಳನ್ನು ಬಳಸಿಕೊಂಡು ಸಹಜವಾದ ತಮ್ಮ ಹಾಸ್ಯ ಪ್ರಜ್ಞೆಯಿಂದ ಪರಿಣಾಮಕಾರಿಯಾಗಿ ಹೇಳುತ್ತಿದ್ದರು. 'ಕತೆಗಾರ ರಾಮಕೃಷ್ಣ' 'ನಗೆಗಾರ ರಾಮಕೃಷ್ಣ' ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದವರು. ಬೋಧನ ಕಲೆಯಲ್ಲಿ ಇವೂ ಮುಖ್ಯ ಎಂಬುದಕ್ಕೆ ರಾಮಕೃಷ್ಣರ 'ಉಪದೇಶಾಮೃತ' ಸಾಕ್ಷಿ. ಇಂದಿನ ಶಿಕ್ಷಣ ಕ್ರಮದಲ್ಲಿ ಇದರ ಅಳವಡಿಕೆ ಅಗತ್ಯ. ಗುರಿ ತಲುಪಿಸಲು, ತಲುಪಿಸಬೇಕಾದ ವಾಹನ-ವಾಹಕ ಎರಡೂ ಮುಖ್ಯ. ಅವೆರಡೂ ಸರಿಯಾಗಿದ್ದರೆ, ಸಮರ್ಪಕವಾಗಿದ್ದರೆ ಗುರಿ ತಲುಪುವುದು ಸುಲಭ. ಪರಿಣಾಮವೂ ಅಷ್ಟೇ ತೃಪ್ತಿಕರ.



# ಬೆಳಗಾವಿ ಆಶ್ರಮಕ್ಕೆ ೨೫ರ ಸಂಭ್ರಮ

**ಭಾ**ರತವನ್ನು ಮೇಲೆತ್ತಬೇಕು, ಸನಾತನ ಧರ್ಮವನ್ನು ಪುನರುತ್ಥಾನಗೊಳಿಸಬೇಕು, ಸಮಸ್ತ ಜನತೆಯನ್ನು ಜಾಗೃತಗೊಳಿಸಿ ದಿವ್ಯತೆಯತ್ತ ಮುನ್ನಡೆಸಬೇಕು ಎಂಬ ಮಹೋನ್ನತ ಉದ್ದೇಶಗಳನ್ನು ಈಡೇರಿಸಲು ಸೂಕ್ತ ಉಪಾಯವೊಂದನ್ನು ಕಂಡುಹಿಡಿಯಬೇಕು ಎಂಬ ಅಭಿಲಾಷೆಯಿಂದ ಒಬ್ಬ ಪರಿವ್ರಾಜಕ ಸಂನ್ಯಾಸಿಯಾಗಿ ಭಾರತವನ್ನು ಪರ್ಯಟನೆ ಮಾಡುತ್ತ ಬಂದ ಸ್ವಾಮಿ ವಿವೇಕಾನಂದರು, ೧೮೯೨ರ ಅಕ್ಟೋಬರ್ ೧೬ ರಂದು ಬೆಳಗಾವಿಗೆ ಬಂದು ತಲುಪಿದರು. ಸ್ವಾಮೀಜಿಯವರು ೧೨ ದಿನಗಳ ಕಾಲ – ಅಂದರೆ ಅಕ್ಟೋಬರ್ ೧೬ ರಿಂದ ೨೭ರ ವರೆಗೆ ಬೆಳಗಾವಿಯಲ್ಲಿ ನೆಲೆಸಿ ಈ ನೆಲವನ್ನು ಪಾವನಗೊಳಿಸಿದರು.

ಸ್ವಾಮೀಜಿಯವರಿಗೆ ಕೊಲ್ಹಾಪುರದ ರಾಜನ ಆಪ್ತ ಕಾರ್ಯದರ್ಶಿಯು ಬೆಳಗಾವಿಯ ಶ್ರೀಯುತ ಸದಾಶಿವ ಬಾಲಕೃಷ್ಣ ಭಾಟೆಯವರನ್ನು ಭೇಟಿಮಾಡಲು ಪರಿಚಯ ಪತ್ರ ನೀಡಿದ್ದರು. ಭಾಟೆಯವರ ಮನೆಯಲ್ಲಿ ಸ್ವಾಮೀಜಿಯವರು ೩ ದಿನಗಳ ಕಾಲ ತಂಗಿದ್ದರು. ಈ ಸಮಯದಲ್ಲಿ ಬೆಳಗಾವಿಯ ಅತಿ ಪ್ರತಿಷ್ಠಿತ ವ್ಯಕ್ತಿಗಳು ಬಂದು ಸ್ವಾಮೀಜಿಯವರೊಂದಿಗೆ ತಮ್ಮ ವಿಚಾರ ವಿನಿಮಯ ಹಾಗೂ ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆಗಳನ್ನು ಮಾಡಿದರು.

ತದನಂತರ ಸ್ವಾಮೀಜಿಯವರು ಶ್ರೀಹರಿಪದ ಮಿತ್ರ ಎಂಬ ಅರಣ್ಯಾಧಿಕಾರಿಗಳ ವಿನಂತಿಯ ಮೇರೆಗೆ ಬೆಳಗಾವಿಯ ಕಿಲ್ಲಾ (ಕೋಟೆ) ದಲ್ಲಿರುವ ಅವರ ಮನೆಯಲ್ಲಿ ೯ ದಿನಗಳ ಕಾಲ ತಂಗಿದ್ದರು. ಸ್ವಾಮೀಜಿಯವರು ಶ್ರೀಯುತ ಹರಿಪದ ಮಿತ್ರ ಮತ್ತು ಅವರ ಧರ್ಮಪತ್ನಿ ಇಂದುಮತಿ ಮಿತ್ರರವರಿಗೆ ಈ ಮನೆಯಲ್ಲಿಯೇ 'ಮಂತ್ರದೀಕ್ಷೆ'ಯನ್ನು ಕರುಣಿಸಿದರು.

ಸ್ವಾಮೀಜಿಯವರು ತಂಗಿದ್ದ ಈ ಮನೆಯನ್ನು ೨೦೦೦ನೇ ಇಸವಿಯಲ್ಲಿ ಕರ್ನಾಟಕ ಸರಕಾರವು 'ರಾಮಕೃಷ್ಣ ಮಿಷನ್' ಗೆ ಹಸ್ತಾಂತರ ಮಾಡಿತು. ಈ ಸ್ಥಳದಲ್ಲಿಯೇ ಪರಮಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜರ ಸಮರ್ಥ ನೇತೃತ್ವದಲ್ಲಿ ೨೦೦೪ರ ಜನವರಿ ೨೩ರಂದು ಶ್ರೀರಾಮಕೃಷ್ಣ ಪರಮಹಂಸರ 'ವಿಶ್ವಭಾವೈಕ್ಯ' ಮಂದಿರದ ಉದ್ಘಾಟನೆಯಾಯಿತು. ಸ್ವಾಮಿ ವಿವೇಕಾನಂದರು ತಂಗಿದ್ದ ಮನೆಯನ್ನು 'ಐತಿಹಾಸಿಕ ಸ್ಥಳ'ವಾಗಿ ಸಂರಕ್ಷಿಸಲಾಗಿದೆ. ಇಲ್ಲಿ ಸ್ವಾಮೀಜಿಯವರ ಬೆಳಗಾವಿಗೆ ಭೇಟಿ ನೀಡಿದಾಗ ತೆಗೆದ ಭಾವಚಿತ್ರದ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ೨೦೨೫ರಲ್ಲಿ ಆಶ್ರಮವು ೨೫ ವರ್ಷಗಳನ್ನು ಪೂರೈಸುತ್ತಿದೆ.

### ಸ್ವಾಮಿ ವಿವೇಕಾನಂದ ಸ್ಮಾರಕ, ರಿಸಾಲ್ದಾರ್‌ಗಲ್ಲಿ, ಬೆಳಗಾವಿ

ಸ್ವಾಮೀಜಿಯವರು ೩ ದಿನಗಳ ಕಾಲ ತಂಗಿದ್ದ ಶ್ರೀ ಭಾಟೆಯವರ ಮನೆಯ ಜೀರ್ಣೋದ್ಧಾರದ ಕಾರ್ಯವನ್ನು ೨೦೧೩–೧೪ರಲ್ಲಿ ಪ್ರಾರಂಭಿಸಲಾಯಿತು. ಜೀರ್ಣೋದ್ಧಾರದ ಕಾರ್ಯವನ್ನು ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವ ನುರಿತ ವಾಸ್ತುಶಿಲ್ಪಿಗಳ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಲಾಗಿದೆ. ಫೆಬ್ರ

ವರಿ ೧, ೨೦೧೯ ರಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಮಹಾಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸುವೀರಾನಂದಜಿ ಮಹಾರಾಜ್ ಅವರಿಂದ ಉದ್ಘಾಟಿಸಲ್ಪಟ್ಟಿತು. ಈಗ ಈ ಮನೆಯನ್ನು 'ಸ್ವಾಮಿ ವಿವೇಕಾನಂದ ಸ್ಮಾರಕ' ಎಂದು ಕರೆಯಲಾಗುತ್ತಿದೆ. ಇದು ಬೆಳಗಾವಿಯ ಕೋಟೆಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದ ಉಪಕೇಂದ್ರವಾಗಿದೆ.

**ಈ ಮನೆಯು ಒಳಗೊಂಡಿರುವ ವಿವರಗಳು:**

- ಸ್ವಾಮಿ ವಿವೇಕಾನಂದರು ಮೊದಲು ೩ ದಿನಗಳ ಕಾಲ ತಂಗಿ ಪಾವನಗೊಳಿಸಿದ ಕೊಠಡಿ, ಅವರು ಉಪಯೋಗಿಸಿದ ಮಂಚ, ಕೋಲು ಮತ್ತು ಕನ್ನಡಿ.
- ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಹಾಗೂ ವೇದಾಂತ ಜ್ಞಾನವನ್ನು ಸಾರುವ ಚಿತ್ರಕಲಾ ಪ್ರದರ್ಶನ, ಭಿತ್ತಿಚಿತ್ರಗಳು, ಶಿಲ್ಪಕಲೆಗಳು ಮತ್ತು ವಸ್ತು ಸಂಗ್ರಹಣಾಲಯ.
- ಸಂವಾದಾತ್ಮಕ ಗ್ಯಾಲರಿ ಮತ್ತು ದೃಶ್ಯ-ಶ್ರಾವ್ಯ ಕೊಠಡಿ.
- ರಾಮಕೃಷ್ಣ - ವಿವೇಕಾನಂದ - ವೇದಾಂತ ಸಾಹಿತ್ಯ ಪ್ರದರ್ಶನ ಮತ್ತು ಮಾರಾಟದ ಮಳಿಗೆ

ಇಂದು ಈ ಸ್ವಾಮಿ ವಿವೇಕಾನಂದ ಸ್ಮಾರಕವು ಒಂದು ಐತಿಹಾಸಿಕ ಸ್ಥಳವಾಗಿ ನಿರ್ಮಾಣಗೊಂಡಿದೆ. ನೂರಾರು ಸಾರ್ವಜನಿಕರು, ವಿದ್ಯಾರ್ಥಿಗಳು ಈ ಸ್ಮಾರಕವನ್ನು ಭೇಟಿ ಮಾಡಿ ಧನ್ಯತೆಯ ಭಾವವನ್ನು ಅನುಭವಿಸುತ್ತಿದ್ದಾರೆ. ಪ್ರತಿದಿನ ಸಾರ್ವಜನಿಕರಿಗೆ ಯೋಗಾಸನ ಮತ್ತು ಸಂಸ್ಕೃತ ತರಗತಿಗಳನ್ನು, ಆಗಾಗ ವಿಶೇಶ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ.

**ರಾಮಕೃಷ್ಣ ಮಿಶನ್ ಆಶ್ರಮದ ಚಟುವಟಿಕೆಗಳು:**

ಕಳೆದ ೨೫ ವರ್ಷಗಳಿಂದ ರಾಮಕೃಷ್ಣ ಮಿಶನ್ ಆಶ್ರಮವು ಸಮಾಜಮುಖಿಯಾಗಿ ಹತ್ತು ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಾ ಬಂದಿದೆ. ಅದರಲ್ಲಿ ಮುಖ್ಯವಾದವುಗಳು :

- ಸಾರ್ವಜನಿಕರಿಗಾಗಿ ಪ್ರತಿವಾರವು ಆಧ್ಯಾತ್ಮಿಕ ಶಿಬಿರ, ಉಪನ್ಯಾಸಗಳನ್ನು ನಡೆಸುತ್ತಾ ಬಂದಿದೆ.
- ಆಶ್ರಮವು ಅನೇಕ ವರ್ಷಗಳಿಂದ ಯುವ ಸಮಾವೇಶ, ಶಿಕ್ಷಕರ ಸಮಾವೇಶ ಮತ್ತು ಭಕ್ತ ಸಮ್ಮೇಳನಗಳನ್ನು ಆಯೋಜಿಸುತ್ತಿದೆ.
- ಮೂರು ತಿಂಗಳಿಗೊಮ್ಮೆ ಶ್ರೀರಾಮಕೃಷ್ಣ ಪರಂಪರೆಯಿಂದ ಮಂತ್ರದೀಕ್ಷೆ ಪಡೆದ ೮೦ ಜನ ಭಕ್ತರಿಗಾಗಿ ೫ ದಿನಗಳ ನಿವಾಸೀ **ಜಪಯಜ್ಞ** ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.
- ಮಕ್ಕಳಿಗಾಗಿ, ಯುವಕರಿಗಾಗಿ 'ವ್ಯಕ್ತಿತ್ವ ನಿರ್ಮಾಣಕಾರಿ' ತರಬೇತಿಗಳನ್ನು ನಡೆಸಲಾಗುತ್ತಿದೆ.


ಭಾಟೆಯವರ ಮನೆ, ಬೆಳಗಾವಿ

- ಪೋಷಕರಿಗಾಗಿ ವಿಶೇಷ ಶಿಬಿರಗಳನ್ನು ಆಯೋಜಿಸುತ್ತಿದೆ.
- ಪ್ರತಿ ವರ್ಷ ೩ ಬಾರಿ ೫೦ ಜನ ಶಿಕ್ಷಕರಿಗಾಗಿ ೩ ದಿನಗಳ ನಿವಾಸೀ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
- ಪ್ರತಿ ವರ್ಷ ೩ ಬಾರಿ ೫೦ ಜನ ಕಾಲೇಜು ವಿದ್ಯಾರ್ಥಿಗಳಿಗಾಗಿ ೩ ದಿನಗಳ ನಿವಾಸೀ ಶಿಬಿರಗಳ ಆಯೋಜನೆ.
- ಸುಮಾರು ೨೦ ವರ್ಷಗಳಿಂದ ಆಶ್ರಮವು 'ರಾಮಕೃಷ್ಣ ವಿವೇಕಾನಂದ ಮತ್ತು ವೇದಾಂತ ಸಾಹಿತ್ಯ ಪ್ರದರ್ಶನ ಮತ್ತು ಮಾರಾಟ ಮಳಿಗೆ'ಯ ಮೂಲಕ ವ್ಯಕ್ತಿತ್ವ ನಿರ್ಮಾಣಕಾರಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶ ಹಾಗೂ ವೇದಾಂತ ಸಾಹಿತ್ಯವನ್ನು ಲಕ್ಷಾಂತರ ಜನರಿಗೆ ತಲುಪಿಸಿದೆ.
- ಪ್ರತಿ ವರ್ಷ ಸುಮಾರು ೪೦೦ ಬಡ ಪ್ರತಿಭಾನ್ವಿತ ಮಕ್ಕಳಿಗೆ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತಿದೆ.
- ಬೆಳಿಗ್ಗೆ ೮ ರಿಂದ ಸಂಜೆ ೮ ರವರೆಗೆ ತೆರೆದಿರುವ 'ಸ್ವಾಮಿ ವಿವೇಕಾನಂದ ಅಧ್ಯಯನ ಭವನ'ದಲ್ಲಿ ಉಚಿತವಾಗಿ ೮೦ ಜನ ಕಾಲೇಜು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.
- ವಿವೇಕಾನಂದ ಕಂಪ್ಯೂಟರ್ ಕೋಚಿಂಗ್ ಸೆಂಟರ್ ಮೂಲಕ ಪ್ರತಿ ವರ್ಷ ಸುಮಾರು ೪೦೦ ಯುವಕರಿಗೆ ಮತ್ತು ಸಾರ್ವಜನಿಕರಿಗೆ ಉಚಿತವಾಗಿ ಕಂಪ್ಯೂಟರ್ ತರಬೇತಿಗಳನ್ನು ನಡೆಸಲಾಗುತ್ತಿದೆ.
- ಆಶ್ರಮದ ಶಾರದಾ ನೇತ್ರಾಲಯದಲ್ಲಿ ಕಳೆದ ೧೩ ವರ್ಷಗಳಿಂದ ಪ್ರತಿ ವರ್ಷ ಸುಮಾರು ೮೦೦ ಬಡ ಜನರಿಗೆ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಯನ್ನು ಮಾಡಿಸಲಾಗುತ್ತಿದೆ.
- 'ದ್ರವ್ಯಯಜ್ಞ' ಎಂಬ ವಿಶೇಷಕಾರ್ಯಕ್ರಮದ ಮೂಲಕ ಪ್ರತಿ ತಿಂಗಳು ೫೦ ಬಡ ಕುಟುಂಬಗಳಿಗೆ ದವಸ ಧಾನ್ಯಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.
- ಆಶ್ರಮವು ಪ್ರತಿವರ್ಷ ೫೦೦ ಬಡ ಜನರಿಗೆ ಕಂಬಳಿಗಳನ್ನು ವಿತರಿಸುತ್ತಿದೆ.